**CC NO.116/2025**
**CW-1 / PW-1**

**ದಿನಾಂಕಃ 31-07-2026** ರಂದು ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣವಚನವನ್ನು ಬೋಧಿಸಲಾಯಿತು.

ಮುಂದುವರೆದ **ಪಾಟೀ ಸವಾಲು** :- ಶ್ರೀ. ಟಿ.ಕೆ.ಹೆಚ್ ವಕೀಲರಿಂದ **ಆರೋಪಿ** ಪರವಾಗಿ :-

ನಾವು ಈ ಪ್ರಕರಣದ ದೂರಿಗೆ ಸಂಬಂಧಿಸಿದಂತೆ ನಾನು ಮತ್ತು ಆರೋಪಿ ನ್ಯಾಯಾಲಯದ ಹೊರಗೆ ರಾಜಿ ಮಾಡಿಕೊಂಡು ರೂ.70,000/- ಹಣವನ್ನು ನಾನು ಪಡೆದುಕೊಂಡಿರುತ್ತೇನೆಂದರೆ ಸಾಕ್ಷಿಯು ಹಣವನ್ನು ಪಡೆದುಕೂಂಡಿರುವುದು ನಿಜ ಹಾಗೂ ನಾನು ಆ ರೀತಿ ಪತ್ರ ಬರೆದುಕೊಟ್ಟಿರುವುದು ನಿಜ ಎಂದು ಹೇಳಿರುತ್ತಾರೆ. ಸಾಕ್ಷಿಯು ಮುಂದುವರೆದು ಸದರಿ ಹಣವನ್ನು ತೆಗೆದುಕೊಳ್ಳುವಂತೆ ನನಗೆ ಯಾರೋ ಒತ್ತಾಯ ಮಾಡಿದ ಕಾರಣದಿಂದ ನಾನು ಹಣವನ್ನು ತೆಗೆದುಕೊಂಡು ನಮ್ಮ ಮನೆಯಲ್ಲಿರುವವರನ್ನು ಕೇಳಿದ್ದು ನಮ್ಮ ಮನೆಯವರು ಒಪ್ಪದೇ ಇದ್ದ ಕಾರಣ ನಾನು ಈ ಪ್ರಕರಣವನ್ನು ನಡೆಸುತ್ತಿದ್ದೇನೆ. ಆ ರೀತಿ ನನಗೆ ಒತ್ತಾಯ ಮಾಡಿ ಹಣ ಕೊಟ್ಟಿದ್ದ ಬಗ್ಗೆ ನನಗೆ ಒತ್ತಾಯ ಮಾಡಿದವರ ವಿರುದ್ದ ಕ್ರಮ ಕೈಗೊಂಡಿರುವುದಿಲ್ಲ, ಕಾರಣ ಅದಕ್ಕೆ ನನ್ನ ಹೆಂಡತಿಯಾದ ಚಾಸಾ-1 ರವರು ಒಪ್ಪಿರುವುದಿಲ್ಲ. ನನಗೆ ನೀಡಿದ 70000/-ಹಣವನ್ನು ಮತ್ತೆ ನಾನು ಆರೋಪಿಗೆ ವಾಪಸ್ಸು ನೀಡಿರುವುದಿಲ್ಲ ಎಂದರೆ ಸರಿ. ನಾನು ಹೇಳುವಂತೆ ಹಾಗೂ ದೂರನ್ನು ನೀಡಿರುವಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಸುಳ್ಳು ದೂರನ್ನು ಚಾಸಾ-1 ರವರು ದಾಖಲಿಸಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು )

ಓ. ಹೇ. ಕೇ. ಸ. ಎಂ. ಒ.                ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಮಾಗಡಿ.

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 116/2025**

ಸಿ.ಡಬ್ಲ್ಯೂ :- 01 / ಪಿ.ಡಬ್ಲ್ಯೂ :- 02

| | |
|---|---|
| ಹೆಸರು | **ಜ್ಯೋತಿ ಟಿ. ಆರ್** |
| ಗಂಡನ ಹೆಸರು | **ಜಯಾನಂದ ಸ್ವಾಮಿ** |
| ವಯಸ್ಸು | **75 ವರ್ಷ** |
| ವೃತ್ತಿ | **ಗೃಹಿಣಿ** |
| ವಾಸಸ್ಥಳ | **ಕಲ್ಯಾಗೇಟ್ ಮಾಗಡಿ** |

**ದಿನಾಂಕಃ 31-07-2026** ರಂದು ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** :-

ಚಾಸಾ-2 ನನ್ನ ಗಂಡ. ಚಾಸಾ-3 ಮತ್ತು 4 ರವರ ಪರಿಚಯವಿರುತ್ತದೆ. ನವೆಂಬರ್-2025 ರಂದು ಚಾಸಾ-2 ರವರ ಕಣ್ಣು ಶಸ್ತ್ರ ಚಿಕಿತ್ಸೆ ಆಗಿದ್ದು, ಅವರು ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದಿರುತ್ತಾರೆ. ನಂತರ ಮಾರನೇ ದಿವಸ ಬೆಳಿಗ್ಗೆ ಟಿ ಕುಡಿಯಲೆಂದು ಕಲ್ಯಾ ಗೇಟಿಗೆ ತನ್ನ ಸ್ನೇಹಿತರೊಂದಿಗೆ ಹೋಗಿದ್ದು, ಆಗ 1ನೇ ಆರೋಪಿ ಚಾಸಾ-2 ರವರ ಹಣೆಗೆ ಡಿಚ್ಚಿ ಹೊಡೆದಿರುತ್ತಾರೆ. ಆ ಪರಿಣಾಮ ಚಾಸಾ-2 ರವರು ಧರಿಸಿದ್ದಂತಹ ಕನ್ನಡಕ ಹೊಡೆದು ಹೋಗಿದ್ದು, ಚಾಸಾ-2 ರವರ ಮೂಗಿನಿಂದ ರಕ್ತ ಬಂದಿರುತ್ತದೆ. ನಂತರ 2ನೇ ಆರೋಪಿ ಕೂಡ ಚಾಸಾ-2 ರವರಿಗೆ ಹೊಡೆದರಂತೆ. ನಂತರ ಈ ಬಗ್ಗೆ ನನಗೆ ಯಾರೋ ಬಂದು ಹೇಳಿದ್ದು, ಅದರಂತೆ ನಾನು ಹೋಗಿ ಅಲ್ಲಿ ನೋಡಿದಾಗ ಚಾಸಾ-2 ರವರು ಆಸ್ಪತ್ರೆಗೆ ಹೊರಟು ಹೋಗಿದ್ದರು.

2. ನಂತರ ನಾನು ಆಸ್ಪತ್ರೆಗೆ ಹೋಗಿ ನೋಡಿದಾಗ ಚಾಸಾ-2 ರವರಿಗೆ ಬ್ಯಾಂಡೇಜ್ ಹಾಕಲಾಗಿತ್ತು. ನಂತರ ನಾನು ಈ ಬಗ್ಗೆ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸಾಕ್ಷಿಗೆ ಕಡತದಲ್ಲಿನ ದೂರು ಎಂಬ ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-04 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-04(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಓ-1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು** :- ಶ್ರೀ. **ಟಿ.ಕೆ.ಹೆಚ್.** ವಕೀಲರಿಂದ **ಆರೋಪಿಗಳ** ಪರವಾಗಿ :-

ನಮ್ಮ ಮನೆ ದಾಸರಬೀದಿಯಲ್ಲಿ ಇದೆ ಎಂದರೆ ಸರಿ. ಆರೋಪಿ ಮತ್ತು ನಮ್ಮ ಮನೆ ಹತ್ತಿರದಲ್ಲಿ ಇವೆ ಎಂದರೆ ಸರಿ. 1ನೇ ಆರೂಪಿಯ ಅಕ್ಕ ಚಂದ್ರಮ್ಮ ಎಂದು ಇದ್ದಾರೆಂದರೆ ಸರಿ. ಸದರಿ

ಚಂದ್ರಮ್ಮ ಮತ್ತು ನಮಗೆ ಮನೆ ವಿಚಾರವಾಗಿ ವ್ಯಾಜ್ಯ ನಡೆದಿರುತ್ತದೆಂದರೆ ಸಾಕ್ಷಿಯು ಈ ಹಿಂದೆ ನಡೆದಿತ್ತು ಎಂದು ನುಡಿದಿರುತ್ತಾರೆ. ನಮ್ಮ ಮನೆಯಿಂದ ಕೃತ್ಯ ಸ್ಥಳಕ್ಕೆ ಸುಮಾರು 100-200 ಮೀಟರ್ ಅಂತರವಿರುತ್ತದೆಂದರೆ ಸರಿ. ನಿಪಿ-4 ದೂರಿನಲ್ಲಿರುವ ಮಾಹಿತಿಯನ್ನು ಚಾಸಾ-2 ರವರು ನನಗೆ ತಿಳಿಸಿದ್ದು, ಅದರಂತೆ ನಾನು ಬರೆದು ದೂರನ್ನು ನೀಡಿರುತ್ತೇನೆ. ಚಾಸಾ-2 ರವರಿಗೆ ಹಲೆ ಮಾಡಿದ್ದನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ. ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವಂತಹ ಕನ್ನಡಕ ಹೊಡೆದು ಹೋಗಿಲ್ಲ, ಮುರಿದು ಹೋಗಿದೆ ಎಂದರೆ ಸಾಕ್ಷಿಯು ಕನ್ನಡಕ ಎರಡು ಭಾಗಗಳಲ್ಲಿರುವ ಹ್ಯಾಂಗಿಂಗ್ಸ್ ಗಳು ಮುರಿದು ಹೋಗಿವೆ ಎಂದು ನುಡಿದಿರುತ್ತಾರೆ. ಎಂ.ಓ-3 ಕನ್ನಡಕ ಪ್ಲಾಸಿಟಿಕ್ ಎಂದರೆ ಸರಿ. ಸಾಮಾನ್ಯವಾಗಿ ಸದರಿ ಪ್ಲಾಸಿಟಿಕ್ ಮೇಲೆ ಇಂದ ಕೆಳಗೆ ಬಿದ್ದರೆ ಅಥವಾ ಬಿದ್ದ ಕನ್ನಡಕವನ್ನು ಯಾರಾದರೂ ತುಳಿದರೆ ಅದು ಮುರಿದು ಹೋಗುವ ಸಾಧ್ಯತೆ ಇದೆ ಎಂದರೆ ಸರಿ.

2. ಎಂ.ಓ-3 ಕನ್ನಡಕ ಆರೋಪಿ 1 ರವರು ಡಿಚ್ಚಿ ಹೊಡೆದರಿಂದ ಮುರಿದು ಹೋಗಿದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ಮತ್ತು ಚಾಸಾ-2 ರವರು ರಾಜೀ ಮಾಡಿಕೊಂಡು 70000/- ಪಡೆದುಕೊಂಡಿರುವ ವಿಚಾರ ನನಗೆ ಗೊತ್ತಿರುತ್ತದೆಂದರೆ ಸರಿ, ಸಾಕ್ಷಿ ಮುಂದುವರದು ಒತ್ತಾಯವಾಗಿ ಚಾಸಾ-2 ರವರಿಗೆ ಹಣವನ್ನು ನೀಡಿರುತ್ತಾರೆಂದು ನುಡಿದಿರುತ್ತಾರೆ. ಆ ರೀತಿ ಹಣ ಪಡೆಯುವ ಸಾಲುವಾಗಿ ಎಂ.ಓ-1 ರಿಂದ 3 ನ್ನು ಸುಳ್ಳಾಗಿ ಸೃಷ್ಟಿ ಮಾಡಿಕೊಂಡು, ಹಳೆ ಸಿವಿಲ್ ವ್ಯಾಜ್ಯದ ಸಲುವಾಗಿ ನಾನು ಈ ಒಂದು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು )

ಓ. ಹೇ. ಕೇ. ಸ. ಎಂ. ಒ. ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಮಾಗಡಿ.